OS 122/2017
PW1

ದಿನಾಂಕ 03.01.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು** : 2ನೇ ಪ್ರತಿವಾದಿ ಪರಃ ಶ್ರೀಮತಿ ಆರ್ ಹೆಚ್ ವಕೀಲರಿಂದಃ

2ನೇ ಪ್ರತಿವಾದಿಯು ಪ್ರಸ್ತುತ ದಾವೆಯಲ್ಲಿ ದಾಖಲಿಸಿರುವ ಪ್ರತಿವಾದಪತ್ರವನ್ನು ಅನುಭವ ಮಾಡಿಕೊಂಡಿರುತ್ತೇನೆ. 2ನೇ ಪ್ರತಿವಾದಿಯು ತನ್ನ ಪ್ರತಿವಾದಪತ್ರದ ಅನುಸೂಚಿಯಲ್ಲಿ ಕಾಣಿಸಿರುವ 2 ಎಲ್ ಐ ಸಿ ಪಾಲಿಸಿಗಳಿಗೆ ವಿಟಾ ಪ್ರೆಸಿಲ್ಲಾ ಡಿ ಮೆಲ್ಲೋರ ವರು ತನ್ನ ತಾಯಿಯವರನ್ನು ನಾಮಿನಿಯಾಗಿ ಕಾಣಿಸಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ. 2ನೇ ಪ್ರತಿವಾದಿಯು ತನ್ನ ಪ್ರತ್ಯುತ್ತರದಲ್ಲಿ ವಕೀಲರ ಮೂಲಕ ನೋಟಿಸುವ ನೀಡುವ ಪೂರ್ವದಲ್ಲಿಯೇ ಕಾನೂನು ಪ್ರಕಾರ ವಿಟಾ ಪ್ರೆಸಿಲ್ಲಾ ಡಿ ಮೆಲ್ಲೋರ ವರ ತಾಯಿಯವರಾದ ಲೀನಾ ಡಿ ಮೇಲ್ಲೋರ ವರಿಗೆ ಎಲ್ ಐ ಸಿ ಪಾಲಿಗಳ ಮೊತ್ತವನ್ನು ಪಾವತಿಸಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿ. ದಾವೆ ದಾಖಲಿಸುವ ಸಂದರ್ಭದಲ್ಲಿ 2ನೇ ಪ್ರತಿವಾದಿಯು ದಾವಾ ಎ ಅನುಸೂಚಿ ಆಸ್ತಿಯ ಮೊತ್ತವನ್ನು ಲೀನ ಡಿ ಮೆಲ್ಲೋರವರಿಗೆ ಪಾವತಿಸಿರುವ ವಿಚಾರ ತಿಳಿದುಕೊಂಡಿರುತ್ತೇನೆ. ಸದ್ರಿ ಪಾವತಿಸಿದ ವಿಚಾರ ತಿಳಿದಿದ್ದರಿಂದ 2ನೇ ಪ್ರತಿವಾದಿಯನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರನ್ನಾಗಿ ಕಾಣಿಸುವ ಅಗತ್ಯತೆ ಇರಲಿಲ್ಲ ಎಂದರೆ ಸಾಕ್ಷಿಯು ವಿಟಾ ಪ್ರೆಸಿಲ್ಲಾರವರ ಮರಣಪ್ರಮಾಣಪತ್ರವನ್ನು ಪಡೆದುಕೊಳ್ಳದೆ ನೀಡಿದ್ದರಿಂದ ಪಕ್ಷಗಾರನ್ನಾಗಿ ಕಾಣಿಸಿರುವುದಾಗಿ ನುಡಿಯುತ್ತಾರೆ. ಸದ್ರಿ ಮರಣಪ್ರಮಾಣಪತ್ರವನ್ನು ಪಡೆದುಕೊಳ್ಳದೆ ಎಲ್ ಐ ಸಿ ಮೊತ್ತವನ್ನು ಪಾವತಿಸಿರುವ ವಿಚಾರವನ್ನು ವಾದಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ 2ನೇ ಪ್ರತಿವಾದಿಯು ಎಲ್ ಐ ಸಿ ಮೊತ್ತವನ್ನು 1ನೇ ಪ್ರತಿವಾದಿಗೆ ಪಾವತಿಸದಂತೆ ಕೇಳಿರುತ್ತೇನೆ. 2ನೇಪ್ರತಿವಾದಿಯನ್ನು ಪ್ರಸ್ತುತ ಪ್ರಕರಣದಲ್ಲಿ ವಿನಾಕಾರಣ ಪಕ್ಷಗಾರನ್ನಾಗಿ ಕಾಣಿಸಿರುತ್ತೇನೆ

ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯನ್ನು ಪ್ರಸ್ತುತ ದಾವೆಯಲ್ಲಿ ವಿನಾ ಕಾರಣ ಪಕ್ಷಗಾರನ್ನಾಗಿ ಕಾಣಿಸಿದ ಮೇರೆಗೆ ಅವರಿಗೆ ಖರ್ಚನ್ನು ಭರಿಸಲು ಬಾದ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ವಿರುದ್ದ ಪ್ರಸ್ತುತ ದಾವೆಯ ವಜಾವಾಗ ತಕ್ಕದ್ದು ಎಂದರೆ ಸರಿಯಲ್ಲ.

**ಪಾಟೀ ಸವಾಲು** : 3ನೇ ಪ್ರತಿವಾದಿ ಪರಃ ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ನನಗೆ ಆಂಗ್ಲ ಭಾಷೆಯನ್ನು ಓದಲು ಬರೆಯಲು ಬರುತ್ತದೆ. 1ನೇ ಪ್ರತಿವಾದಿಯ ಕಾರ್ಕಳ ಶಾಖೆಯ ಕೆನರಾ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರುವ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ದಿಃ18.07.2017 ರಂದು 2ನೇ ಪ್ರತಿವಾದಿಯು 1ನೇ ಪ್ರತಿವಾದಿಯ ಉಳಿತಾಯ ಖಾತೆಗೆ ಹಣವನ್ನು ಜಮಾ ಮಾಡಿದ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ಸಾಕ್ಷಿ ಪುನಃ ಮುಂದುವರಿದು ಆ ರೀತಿ 1ನೇ ಪ್ರತಿವಾದಿಯ ಖಾತೆಗೆ ಹಣವನ್ನು ಜಮಾ ಮಾಡಿರುವ ಬಗ್ಗೆ 2ನೇ ಪ್ರತಿವಾದಿಯು ತಿಳಿಸಿದ್ದು ಅದಕ್ಕೆ 3ನೇ ಪ್ರತಿವಾದಿಗೆ ಮೌಖಿಕವಾಗಿ ನೋಟಿಸು ನೀಡುವಂತೆ ಸೂಚಿಸಿರುತ್ತಾರೆ. ದಿಃ27.07.2017 ರಂದು 1ನೇ ಪ್ರತಿವಾದಿಯು ತನ್ನ ಖಾತೆಯಿಂದ 2ನೇ ಪ್ರತಿವಾದಿಯಿಂದ ಬಂದಂತಹ ಹಣವನ್ನು ಸಂಪೂರ್ಣವಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯು ಜಮಾ ಮಾಡಿದ ಹಣವನ್ನು 3ನೇ ಪ್ರತಿವಾದಿಯು ವಾಪಸ್ಸು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ 3ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಹಣ ಮರುಪಾವತಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ಅಭ್ಯಂತರವಿರುವುದಿಲ್ಲ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯು ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ 2ನೇ ಪ್ರತಿವಾದಿಯು ಹಣ ಮರುಪಾವತಿಯಾದ ಬಗ್ಗೆ ಮೌಖಿಕವಾಗಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ, 3 ನೇಪ್ರತಿವಾದಿಯನ್ನು ಅನಗತ್ಯ ಪಕ್ಷಗಾರನ್ನಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ, ನಾನು ವಾದ ಪತ್ರದಲ್ಲಿ ಕೇಳಿರುವಂತೆ 3ನೇಪ್ರತಿವಾದಿಯಿಂದ ಯಾವುದೇ

ನಿವೃತ್ತಿಯನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ಪ್ರಸ್ತುತ ದಾವೆಯಲ್ಲಿ ದಾಖಲಿಸಿರುವ ಪ್ರತಿವಾದಪತ್ರವನ್ನು ಅನುಭವ ಮಾಡಿಕೊಂಡಿರುತ್ತೇನೆ. ಕಾನೂನಿನ ಆದೇಶದ ಹೊರತು 1ನೇ ಪ್ರತಿವಾದಿಯ ಖಾತೆಯನ್ನು ತೆಡೆಹಿಡಿಯುವ ಬಗ್ಗೆ 3ನೆ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯು ಪ್ರಸ್ತುತ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿಯೇ ತಮ್ಮ ಖಾತೆಯಿಂದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು 3ನೇ ಪ್ರತಿವಾದಿಯನ್ನು ಅನಗತ್ಯವಾಗಿ ಪಕ್ಷಗಾರನ್ನಾಗಿ ಕಾಣಿಸಿರುವುದರಿಂದ ಅವರಿಗೆ ಖರ್ಚನ್ನು ಬ್ಯಾದ್ಯಸ್ಥನು ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಪರ ಃ ಶ್ರೀಮತಿ ವಿ ಜಿ ವಕೀಲರು ಸಮಯ ಕೋರಿದ್ದು ಮಧ್ಯಾಹ್ನದ ಅವಧಿಗೆ ಮುಂದುಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ.